ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 03–02–2017

## ಪತ್ರಿಕಾ ಆಮಂತ್ರಣ

1. ಬೆಂಗಳೂರು ನಗರ, ಸಾರ್ವಜನಿಕ ಆಸ್ಪತ್ರೆಯ ಜಯನಗರ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ 100 ಹಾಸಿಗೆಗಳ ಎಂ.ಸಿ.ಹೆಚ್. ವಿಭಾಗ ಕಟ್ಟಡದ ಉದ್ಘಾಟನಾ ಸಮಾರಂಭ:

   ಉದ್ಘಾಟನೆ:

   ಕೆ.ಆರ್. ರಮೇಶ್‌ಕುಮಾರ್ – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

   ಘನ ಉಪಸ್ಥಿತಿ:

   ಅನಂತಕುಮಾರ್ – ಕೇಂದ್ರ ಸಚಿವರು, ಸಂಸದೀಯ ವ್ಯವಹಾರಗಳು ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ.

   ಅಧ್ಯಕ್ಷತೆ:

   ಬಿ.ಎನ್. ವಿಜಯಕುಮಾರ್ – ಶಾಸಕರು, ಜಯನಗರ ವಿಧಾನಸಭಾಕ್ಷೇತ್ರ.

   ದಿನಾಂಕ: 04–02–2017, ಶನಿವಾರ ಸಮಯ: 10.30 ಗಂಟೆಗೆ.
   ಸ್ಥಳ: ಸಾರ್ವಜನಿಕ ಆಸ್ಪತ್ರೆ ಆವರಣ, ಜಯನಗರ, ಬೆಂಗಳೂರು.

2. ಪತ್ರಿಕಾಗೋಷ್ಠಿ:

   ಡಿ.ಹೆಚ್.ಶಂಕರಮೂರ್ತಿ,
   ವಿಧಾನ ಪರಿಷತ್ತಿನ ಸಭಾಪತಿ,

   ದಿನಾಂಕ: 04–02–2017, ಶನಿವಾರ ಸಮಯ: 11.30 ಗಂಟೆಗೆ.
   ಸ್ಥಳ: ಕೊಠಡಿ ಸಂಖ್ಯೆ 106, ಮೊದಲನೇ ಮಹಡಿ, ವಿಧಾನಸೌಧ, ಬೆಂಗಳೂರು.

3. **10th P.G.C. Chengappa Memorial Lecture by:**

**Hon'ble Mr. Justice L. Nageshwara Rao, Judge, Supreme Court of India.**

**Presided by:**

**Hon'ble Mr. Justice Jayant Patel, Judge, High Court of Karnataka**

**Date : 04-02-2017 Saturday, Time: 5.00 PM.**

**Place: Patron-in-Chief Hall, High Court of Karnataka, Bengaluru.**

## ಪತ್ರಿಕಾ ಪ್ರಕಟಣೆ

## ರಥಸಪ್ತಮಿ ವಿಶೇಷದಂದು ಸೂರ್ಯ ನಮಸ್ಕಾರ

ಬೆಂಗಳೂರು, ಫೆಬ್ರವರಿ 3 , (ಕರ್ನಾಟಕ ವಾರ್ತೆ)

ರಥಸಪ್ತಮಿ ಪ್ರಯುಕ್ತ ಯೋಗ ಗಂಗೋತ್ರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಆಯುಷ್ ಇಲಾಖೆಗಳ ಸಹಭಾಗಿತ್ವದಲ್ಲಿ ಇಂದು ವಿಧಾನಸೌಧದ ಮುಂಭಾಗ ಬೆಳಿಗ್ಗೆ 6.00 ಗಂಟೆಗೆ ಸುಮಾರು 300 ಯೋಗಾಸಕ್ತರು ನೂರೆಂಟು ಬಾರಿ ಸೂರ್ಯ ನಮಸ್ಕಾರ ಮಾಡಿ ಯೋಗ ಮತ್ತು ಧ್ಯಾನವನ್ನು ಮಾಡಿದರು.

ಈ ಯೋಗ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಎ. ಶರವಣ ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಎಸ್‌ಎಂ:ಜೆಡಿ:ಜಿಪಿಆರ್.

## ವಿದ್ಯಾರ್ಥಿಗಳು ಉತ್ತಮ ಸಂಸ್ಕಾರ ಮತ್ತು ಜವಾಬ್ದಾರಿಯನ್ನು ಬೆಳೆಸಿಕೊಳ್ಳಲು ಕರೆ

– ರಾಜ್ಯಪಾಲ ವಜುಬಾಯಿ ರೂಡಬಾಯಿ ವಾಲ

ಬೆಂಗಳೂರು, ಫೆಬ್ರವರಿ 3 , (ಕರ್ನಾಟಕ ವಾರ್ತೆ)

ಪ್ರಾಥಮಿಕ ಶಿಕ್ಷಣ ಕೇವಲ ಅಕ್ಷರ ಜ್ಞಾನ ಕಲಿಸುವುದಷ್ಟೇ ಅಲ್ಲ, ಮಕ್ಕಳ ಗುಣಗಳನ್ನು ಬೆಳೆಸುವ ಸಮಯವಾಗಿದ್ದು ಈ ವಯಸ್ಸಿನಲ್ಲಿ ಕಲಿತ ಬುದ್ಧಿ ಅವರ ಜೀವನ ಸಂಸ್ಕಾರವನ್ನು ಪ್ರತಿಬಿಂಬಿಸುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಉತ್ತಮ ಸಂಸ್ಕಾರ ಮತ್ತು ಜವಾಬ್ದಾರಿಯನ್ನು ಬೆಳೆಸಿಕೊಳ್ಳಬೇಕು ಎಂದು ರಾಜ್ಯಪಾಲ ವಜುಬಾಯಿ ರೂಡಬಾಯಿ ವಾಲ ಅವರು ಮಕ್ಕಳಿಗೆ ಕರೆ ನೀಡಿದರು.

ರಾಜಭವನದ ಗಾಜಿನ ಮನೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಶಾಖೆ ಹಮ್ಮಿಕೊಂಡಿದ್ದ ಚತುರ್ಥ ಚರಣ್, ಹೀರಕ್ ಪಂಕ್ ಮತ್ತು ರಾಜ್ಯ ಪುರಸ್ಕಾರ ಪ್ರಮಾಣ ಪತ್ರಗಳನ್ನು ಹಾಗೂ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪ್ರಶಸ್ತಿ ಪತ್ರ ಪ್ರದಾನ ಮಾಡಿ ಮಾತನಾಡುತ್ತಾ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಮಕ್ಕಳಲ್ಲಿ ಉತ್ತಮ ಶಿಸ್ತು ಮತ್ತು ಸಂಸ್ಕಾರವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ ಎಂದರು.

ಮಹಾತ್ಮ ಗಾಂಧಿ ಉನ್ನತ ವ್ಯಾಸಂಗ ಪಡೆದು ಭಾರತಕ್ಕೆ ಮರಳಿದಾಗ ತಮ್ಮ ಪಾಡಿಗೆ ತಾವು ಮತ್ತು ತಮ್ಮ ಜೀವನ ಎಂದು ಕೊಂಡಿದ್ದರೆ ಇಂದು ನಾವೆಲ್ಲ ಹೀಗೆ ಬದುಕಲು ಸಾಧ್ಯವಿರಲಿಲ್ಲ, ಸಂಸಾರದಷ್ಟೇ ಸಮಾಜದ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಗುಣವನ್ನು ಬೆಳೆಸಿಕೊಳ್ಳಬೇಕು, ಕೆಟ್ಟದನ್ನು ಕಂಡಾಗ ಅದರ ವಿರುದ್ಧ ಹೋರಾಡುವ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ತಲೆಮಾರಿನಿಂದ ತಲೆಮಾರಿಗೆ ಮಾನವರ ಬುದ್ಧಿ ಹೆಚ್ಚಾಗುತ್ತಿದ್ದು ಧೈರ್ಯ ಕಡಿಮೆಯಾಗುತ್ತಿರುವುದು ಕಳವಳಕಾರಿ ವಿಷಯವಾಗಿದೆ ಎಂದು ಆತಂಕ ವ್ಯಕ್ತಪಡಿಸಿದ ಅವರು ದೇಶವನ್ನು ಕಾಯುವ ಸೈನಿಕರನ್ನು ಸ್ಮರಿಸಿಕೊಳ್ಳುವ ಅಗತ್ಯವಿದ್ದು ಸೇವಾ ಮನೋಭಾವವನ್ನು ಇಂದಿನ ಮಕ್ಕಳು ರೂಢಿಸಿಕೊಳ್ಳುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ತನ್ವೀರ್ ಸೇಠ್ ಮಾತನಾಡಿ ಇತ್ತೀಚೆಗೆ ಮೈಸೂರಿನಲ್ಲಿ ನಡೆದ ರಾಷ್ಟ್ರಮಟ್ಟದ ಜಾಂಬೂರಿ ಉತ್ಸವ ಯಶಸ್ವಿಗೆ ಕರ್ನಾಟಕದ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರತೀಕವಾಗಿದೆ, ರಾಜ್ಯದಲ್ಲಿ **4,75,000** ವಿದ್ಯಾರ್ಥಿಗಳು ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿದ್ದು **5,000** ಶಿಕ್ಷಕರು ಇದರಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳ ಜೀವನದಲ್ಲಿ ಸಾಮಾಜಿಕ ಬದ್ಧತೆಯನ್ನು ತುಂಬಲು ಸಹಾಯಕವಾಗಿದ್ದು ಇದರಿಂದ ಸಾಮಾಜಿಕ ಜವಾಬ್ದಾರಿ ಹೆಚ್ಚುತ್ತದೆ ಎಂದು ಹೇಳಿ ಇಂದು ಪ್ರಶಸ್ತಿ ಪಡೆದ ಎಲ್ಲಾ ಮಕ್ಕಳಿಗೂ ಶುಭ ಕೋರಿದರು.

ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಆಯುಕ್ತ ಹಾಗೂ ಮಾಜಿ ಸಚಿವ ಪಿ.ಜಿ.ಆರ್ ಸಿಂಧ್ಯಾ ಸೇರಿದಂತೆ ಕರ್ನಾಟಕ ಶಾಖೆಯ ಉನ್ನತ ಅಧಿಕಾರಿಗಳು ಮತ್ತು ನೂರಾರು ವಿದ್ಯಾರ್ಥಿಗಳು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

<u>ಪ್ರಶಸ್ತಿ ಪಡೆದ ಜಿಲ್ಲಾವಾರು ವಿದ್ಯಾರ್ಥಿಗಳು:</u>

ಬಾಗಲಕೋಟೆ ಜಿಲ್ಲೆಯ ಬಸವರಾಜ ಗಂಗಾಚಾರಿ, ತೇಜಸ್ವಿನಿ, ನೀಲರಾಜ್ ಭಜಂತ್ರಿ ಹಾಗೂ ಕೀರ್ತಿ ಬೆಳಗಾವಿ ಜಿಲ್ಲೆಯ ವಿಜಯ ಮೆಲ್‌ವಿನ್, ಶೃಷ್ಠಿ ಎಸ್. ಕಿನ್ನಿಕರ, ಅಭಿಷೇಕ್ ಎನ್ ಹಾಗೂ ಅನುಷ್, ಬಳ್ಳಾರಿ ಜಿಲ್ಲೆಯ ವಿನಾಯಕ ಕುಮಾರ್ ಎನ್.ಎಂ. ಮಹಾಲಕ್ಷ್ಮೀ, ಪ್ರಶಾಂತ್ ಕುಮಾರ್ ಜಿ.ಹೆಚ್ ಹಾಗೂ ರಿಬಿಕಮ್ಮ.

ಬೆಂಗಳೂರು ಉತ್ತರ ಜಿಲ್ಲೆಯ ಚೈತನ್ಯ, ಅಕ್ಷಯ್ ಗುರುಸ್ವಾಮಿ ಹರೀಶ್ ಗೌಡ, ಪ್ರೇರಣಾ, ಕಿರಣಕುಮಾರ್ ಎಂ. ಹಾಗೂ ರಂಜಿತಾ ಎಸ್. ಬೆಂಗಳೂರು ರೂರಲ್ ಜಿಲ್ಲೆಯ ಸ್ಪರ್ಶ ಪಿ. ಕುಮಾರ್, ರಾಜೇಶ್ ಟಿ.ಎನ್. ನವ್ಯ ಹಾಗೂ ಅರ್ಪಿತಾ. ಬೆಂಗಳೂರು ದಕ್ಷಿಣ ಜಿಲ್ಲೆಯ ಸುಚಿತ ಗೌಡ, ಯಾಮಿನಿ, ಭರತಕುಮಾರ ಆರಾಧ್ಯ ಹಾಗೂ ಮುಕಾಂಬಿಕಾ.

ಬೀದರ್ ಜಿಲ್ಲೆಯ ಸಂಕತ್ ಬಿರಾದಾರ್ ಹಾಗೂ ನಿಖಿತ್, ಚಾಮರಾಜನಗರ ಜಿಲ್ಲೆಯ ಧನುಷ್, ಯಶಸ್ವಿನಿ ವೈ.ಆರ್, ಪ್ರಣವ್ ಬಿ ಹಾಗೂ ಪೂಜಾ. ಚಿಕ್ಕಬಳ್ಳಾಪುರ ಜಿಲ್ಲೆಯ ನಿಶ್ಚಲ, ಶ್ರಾವ್ಯ ಮತ್ತು ತಿಮ್ಮರಾಯ. ಚಿಕ್ಕಮಗಳೂರು ಜಿಲ್ಲೆಯ ಜೀವನ್ ರುದ್ರೇಶ್ ಹಾಗೂ ಸುಜನ್, ಚಿತ್ರದುರ್ಗ ಜಿಲ್ಲೆಯ ಚೈತನ ಜೆ.ಎಸ್ ಹಾಗೂ ಅನನ್ಯ.

ದಕ್ಷಿಣ ಕನ್ನಡ ಜಿಲ್ಲೆಯ ಅಕ್ಷಯ್, ರಚಿತಾ ಸಿ. ಶೆಟ್ಟಿಗಾರ, ಶ್ರೇಯಸ್ ಅಶ್ವಿನಿ, ಅಶ್ವಿನಿ ಎ. ಕಿಣಿ ಹಾಗೂ ಚೈತ್ರ ಎಸ್. ದಾವಣಗೆರೆ ಜಿಲ್ಲೆಯ ಗಗನದೀಪ, ನಿಸರ್ಗ, ಸಂದೀಪ್ ಎಸ್. ಸೋಪಿನ ಹಾಗೂ ಸುಶ್ಮಿತ. ಧಾರವಾಡ ಜಿಲ್ಲೆಯ ಉಸೈಫಾ, ಮೇಘ, ಅಭಿಷೇಕ್ ಮಡಿವಾಳರ್ ಹಾಗೂ ಪ್ರತಿಭಾ.

ಗದಗ ಜಿಲ್ಲೆಯ ಪ್ರಜ್ವಲಾ ಎಸ್.ಎನ್. ಮಧು ಹಾಗೂ ಸುರೇಶ್ ಆಲೂರು. ಹಾಸನ ಜಿಲ್ಲೆಯ ನಾಗಮಣಿ, ಹರ್ಷ ಹೆಚ್. ಕೆ., ಲಿಖಿತ, ಕುಮಾರಸ್ವಾಮಿ ಕೆ.ಸಿ. ಹಾಗೂ ಸುಶ್ಮಿತಾ. ಹಾವೇರಿ ಜಿಲ್ಲೆಯ ರಾಘವೇಂದ್ರ, ಮಂಜುನಾಥ ಎಸ್. ಹಂಚಿನಾಳ, ಅಶ್ವಿನಿ. ಕಲಬುರಗಿ ಜಿಲ್ಲೆಯ ವೀರೇಶ್ ಎಸ್.ಪಿ. ಶ್ರಾವಣಿ, ವಿಶಾಲ್ ಕಟ್ಟಿಮನಿ ಹಾಗೂ ಶ್ರೀನಿಧಿ. ಕಾರವಾರ ಜಿಲ್ಲೆಯ ಅಮೂಲ್ಯ, ರಕ್ಷಿತ್ ಹೆಚ್, ಶ್ರೀರಕ್ಷಾ ಹಾಗೂ ಶ್ರೀ ಗಣೇಶ್ ಹೆಗಡೆ.

ಕೊಡಗು ಜಿಲ್ಲೆಯ ದೇವಿನ್ ತಿಮ್ಮಯ್ಯ, ಕೋಲಾರ ಜಿಲ್ಲೆಯ ಶರತ್, ಹರ್ಷಿತಾ, ಚೇತನ್ ಪ್ರಸಾದ್ ರೆಡ್ಡಿ, ಆಶ್ರಿತ, ನಿರಂಜನ ಕುಮಾರ್ ವಿ ಹಾಗೂ ಅಶ್ವಿನಿ. ಕೊಪ್ಪಳ ಜಿಲ್ಲೆಯ ಅನ್ವರ್ ಪಾಶಾ, ರಮ್ಯಕೃಷ್ಣ. ಮಂಡ್ಯ ಜಿಲ್ಲೆಯ ಹೇಮಂತ್, ಶಿವಕುಮಾರ್ ಆರ್. ರಾಯಿಸ್ತಾ ಮೈಸೂರು ಜಿಲ್ಲೆಯ ಕೇಶವ ಆರ್.ಪಿ. ಭೂಮಿಕಾ, ಸುಪ್ರೀತ್ ಬಿ.ಎಸ್. ಅಮೃತಾ, ಚೇತನ ಬಿ.ಎಸ್. ಹಾಗೂ ಸ್ಫೂರ್ತಿ.

ರಾಯಚೂರು ಜಿಲ್ಲೆಯ ಪಿ. ಜಗದೀಶ್ವರ್ ರೆಡ್ಡಿ, ಸಹನಾ, ಪೃಥ್ವೀಶ್ ಬಿ ಹಾಗೂ ವಂಶಿ. ರಾಮನಗರ ಜಿಲ್ಲೆಯ ಜೀವನ್, ಚುಶಿಕಾ, ಚಂದನ್ ಗೌಡ ಟಿ.ಪಿ ಹಾಗೂ ಕವನಶ್ರೀ. ಶಿವಮೊಗ್ಗ ಜಿಲ್ಲೆಯ ಮಂಜುನಾಥ ಎಂ.ಎನ್. ಪ್ರಣತಿ, ಸತ್ಯ ಪ್ರಮೋದ್ ಹೆಚ್.ಹೆಚ್ ಹಾಗೂ ಪ್ರಿಯಾಂಕಾ .

ಶಿರಸಿಯ ಗೌತಮ್ ಆರ್. ಹೆಗಡೆ ಹಾಗೂ ದೀಕ್ಷಾ. ತುಮಕೂರು ಜಿಲ್ಲೆಯ ಅಕ್ಷಯ್, ಅಮೃತಾ, ಡಿ.ಇ. ದಿನೇಶ್ ಹಾಗೂ ಸಿರಿ ಎಸ್.ಆರ್. ಉಡುಪಿ ಜಿಲ್ಲೆಯ ಧನುಷ್, ಐಶ್ವರ್ಯ,

ವಿನಾಯಕ್, ಪವಿತ್ರ, ನವೀನ್ ಶೆಣೈ ಹಾಗೂ ಶರಣ್ಯ. ವಿಜಯಪುರ ಜಿಲ್ಲೆಯ ವಿನಾಯಕ್ ಹೂಗಾರ ಹಾಗೂ ಅಕ್ಷತಾ. ಯಾದಗಿರಿ ಜಿಲ್ಲೆಯ ಅದಿತ್ಯ ಹಾಗೂ ಸುಮಾ ಅವರಿಗೆ ವಿವಿಧ ಪ್ರಕಾರಗಳಲ್ಲಿ ಲಭಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಅಬಕಾರಿ ಇಲಾಖೆ ಟೋಲ್‌ಫ್ರೀ ಸಂಖ್ಯೆ

ಬೆಂಗಳೂರು, ಫೆಬ್ರವರಿ 3 , (ಕರ್ನಾಟಕ ವಾರ್ತೆ)

ರಾಜ್ಯಾದ್ಯಂತ ಅಬಕಾರಿ ಅಕ್ರಮಗಳು ತಡೆಗಟ್ಟುವ ದೃಷ್ಟಿಯಿಂದ ಯಾವುದಾದರೂ ಅಬಕಾರಿ ಅಕ್ರಮಗಳು ಕಂಡುಬಂದಲ್ಲಿ ಮಾಹಿತಿ/ದೂರನ್ನು ನೀಡಲು ಸಾರ್ವಜನಿಕರು ಅಬಕಾರಿ ಜಂಟಿ ಆಯುಕ್ತರ ಕಚೇರಿ, ರಾಜ್ಯ ವಿಚಕ್ಷಣಾ ದಳ, ಬೆಂಗಳೂರು ಕಚೇರಿಯ ಕಾರ್ಯನಿರ್ವಾಹಕರ ಸಿಬ್ಬಂದಿಗಳನ್ನು ಮುಕ್ತವಾಗಿ ಸಂಪರ್ಕಿಸಲು ಅನುಕೂಲವಾಗುವಂತೆ ಈ ಕಚೇರಿ ಅಗತ್ಯವಿರುವ ಎಲ್ಲಾ ಮಾಹಿತಿಗಳನ್ನು ಹೊಸದಾಗಿ ಪ್ರಾರಂಭಿಸಿರುವ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿರುತ್ತದೆ ಹಾಗೂ ಹೊಸದಾದ ಟೋಲ್ ಫ್ರೀ ದೂರವಾಣಿ ಸೇವೆಯನ್ನು ಪ್ರಾರಂಭಿಸಲಾಗಿರುತ್ತದೆ.

ಸಾರ್ವಜನಿಕರು ಅಂತರ್ಜಾಲದಲ್ಲಿ ಈ ಕಚೇರಿಯ ಬಗ್ಗೆ ಮಾಹಿತಿ ಪಡೆಯಬಹುದಾದ ವೆಬ್‌ಸೈಟ್ **www.karnataka.gov.in/stateeib** ಹಾಗೂ ಈ ಕಚೇರಿಗೆ ನೇರವಾಗಿ ಸಂಪರ್ಕಿಸಬಹುದಾದ ಟೋಲ್ ಫ್ರೀ ದೂರವಾಣಿ ಸಂಖ್ಯೆ 18004252550 ಮೂಲಕ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಇಂದಿರಾನಗರದಲ್ಲಿ ಸಾರಿಗೆ ಅದಾಲತ್

ಬೆಂಗಳೂರು, ಫೆಬ್ರವರಿ 3 , (ಕರ್ನಾಟಕ ವಾರ್ತೆ)

ಇಂದಿರಾನಗರದ ಬಿ.ಡಿ.ಎ. ವಾಣೀಜ್ಯ ಸಂಕೀರ್ಣದಲ್ಲಿನ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬೆಂಗಳೂರು (ಪೂರ್ವ), ಇಲ್ಲಿ ಫೆಬ್ರವರಿ 6 ರಂದು ಮಧ್ಯಾಹ್ನ 3.00 ಗಂಟೆಗೆ ಸಾರಿಗೆ ಅದಾಲತ್‌ನ್ನು ಹಮ್ಮಿಕೊಂಡಿದೆ.

ಈ ಅದಾಲತ್‌ನಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಈ ವ್ಯಾಪ್ತಿಗೆ ಬರುವ ಸಾರ್ವಜನಿಕರು ಈ ಸಾರಿಗೆ ಅದಾಲತ್‌ನ ಪ್ರಯೋಜನವನ್ನು ಪಡೆದುಕೊಳ್ಳಬಹುದಾಗಿದೆ ಎಂದು ಪ್ರಾದೇಶಿಕ ಸಾರಿಗೆ ಇಲಾಖಾ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್

# ಕ್ರಿಯಾತ್ಮಕ, ಸೃಜನಶೀಲ ಮನಸ್ಸಿದ್ದಲ್ಲಿ ಅಸಾಧ್ಯವಾದದ್ದು ಯಾವುದೂ ಇಲ್ಲ

– ಬಿ.ಎಲ್. ಶಂಕರ್

**ಬೆಂಗಳೂರು, ಫೆಬ್ರವರಿ 3 , (ಕರ್ನಾಟಕ ವಾರ್ತೆ)**

ವೈವಿಧ್ಯಮಯ ವಸ್ತುಗಳ ಸಂಗ್ರಹಗಾರವನ್ನು ಹೊಂದಿರುವ ದಶರಥ ಸಿಂಗ್ ಅವರು ಸಾಂಸ್ಕೃತಿಕ ರಾಯಭಾರಿಯಂತೆ ವಿಸ್ಮಯಕರ ರೀತಿಯಲ್ಲಿ ಕಳೆದ 40 ವರ್ಷಗಳಿಂದ ಪಾರಂಪರಿಕ ವಸ್ತುಗಳನ್ನು ಸಂಗ್ರಹಿಸುವ ಮೂಲಕ ಇತಿಹಾಸವನ್ನು ಜೀವಂತವಾಗಿರಿಸುವಲ್ಲಿ ಅಮೂಲಾಗ್ರ ಕೊಡುಗೆಯನ್ನು ಯುವ ಜನಾಂಗಕ್ಕೆ ನೀಡಿದ್ದಾರೆ ಎಂದು ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷರಾದ ಬಿ.ಎಲ್. ಶಂಕರ್ ಅವರು ಶ್ಲಾಘಿಸಿದರು.

ನಗರದ ಕರ್ನಾಟಕ ಚಿತ್ರಕಲಾ ಪರಿಷತ್ ಆವರಣದಲ್ಲಿ ದಶರಥ್ ಸಿಂಗ್ ಅವರು ಸಂಗ್ರಹಿಸಿರುವ ವಿನೂತನ ಹಾಗೂ ವೈವಿಧ್ಯಮಯವಾದ ವಸ್ತುಗಳ ಪ್ರದರ್ಶನ " ವಿಸ್ಮಯ ಪ್ರಪಂಚ" ಪ್ರದರ್ಶನ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಬಾಲ್ಯದಿಂದಲೇ ಅಪರೂಪದ ವಸ್ತುಗಳ ಸಂಗ್ರಹಣೆಯಲ್ಲಿ ತೊಡಗಿರುವ ದಶರಥ ಸಿಂಗ್‌ರವರು ಸುಮಾರು 8000 ಕ್ಕೂ ಅಧಿಕ ಲಗ್ನ ಪತ್ರಿಕೆಗಳು, ಮೈಸೂರು ಅರಸರ ವಂಶಾವಳಿಯ ಮೇಲೆ ಬೆಳಕು ಚೆಲ್ಲುವ ಲೇಖನಗಳ ಸಂಗ್ರಹ, ವಿದೇಶಿ ನಾಣ್ಯಗಳು, ಬ್ರಿಟಿಷ್ ಕಾಲದ ದೈನಂದಿನ ಉಪಯೋಗಿ ವಸ್ತುಗಳು, ಪಿಂಗಾಣಿ ಬೊಂಬೆಗಳು, ಐನೂರು ವರ್ಷಗಳನ್ನು ಲೆಕ್ಕಹಾಕುವ ಕ್ಯಾಲೆಂಡರ್, ಹಿತ್ತಾಳೆ ತಕ್ಕಡಿ ಸೇರಿದಂತೆ ವೈವಿಧ್ಯಮಯ ಸಂಗ್ರಹವನ್ನು ಹೊಂದಿದ್ದಾರೆ ಎಂದು ತಿಳಿಸಿದರು.

ಓರ್ವ ವ್ಯಕ್ತಿ ಕ್ರಿಯಾತ್ಮಕನಾಗಿದ್ದರೆ, ಸೃಜನಶೀಲತೆಯಿಂದ ಕೂಡಿದ್ದರೆ ಏನ್ನೆಲ್ಲಾ ಸಾಧಿಸಬಹುದು ಎನ್ನುವುದಕ್ಕೆ ದಶರಥ ಸಿಂಗ್ ಅವರ ಸಂಗ್ರಹ ಸಾಕ್ಷಿಯಾಗಿದೆ. ಇಂತಹ ಪ್ರಯತ್ನ ಬದ್ಧತೆಯಿದ್ದಲ್ಲಿ ಮಾತ್ರ ಸಾಧ್ಯವೆಂದು ಬಿ.ಎಲ್. ಶಂಕರ್ ಅವರು ತಿಳಿಸಿದರು.

ಗೂಗಲ್‌ನಂತಹ ಅಂತರ್ಜಾಲ ಬಳಕೆಯಿಂದ ಇಂದು ಬೆರಳ ತುದಿಯಲ್ಲಿ ಇಡೀ ವಿಶ್ವವನ್ನೇ ನೋಡಲು ಸಾಧ್ಯ. ಆದರೆ ಇಂತಹ ಬಳಕೆಗಳು ಮನುಷ್ಯನ ಶ್ರಮದ ಬದುಕನ್ನು ಕುಂಠಿತಗೊಳಿಸುತ್ತದೆ. ಸಂಶೋಧನೆ ಮತ್ತು ಕುತೂಹಲದ ಮನಸ್ಸುಗಳು ಇಲ್ಲವಾಗುತ್ತಿದೆ ಎಂದರು.

ದಶರಥ ಸಿಂಗ್ ಅವರ ಈ ಅಮೂಲಾಗ್ರ ಸಂಗ್ರಹಗಾರ ಇಂದಿನ ಯುವ ಜನಾಂಗಕ್ಕೆ ಉಪಯೋಗಕರ ಇಂತಹ ಪ್ರದರ್ಶನ ಏರ್ಪಡಿಸುವ ಮೂಲಕ ಚಿತ್ರಕಲಾ ಪರಿಷತ್ತಿಗೆ ಮತ್ತೊಂದು ಆಯಾಮ ಒದಗಿದಂತಾಗಿದೆ ಎಂದು ಅವರು ತಿಳಿಸಿದರು.

ಮಾಜಿ ಸಚಿವ ಆರ್. ಕೃಷ್ಣಪ್ಪ, ಹಿರಿಯ ಕಲಾವಿದೆ ಕಮಲಾಕ್ಷಿ, ಇತರೆ ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಎಸ್ಎಂ:ಎಂಆರ್ಎಂ:ಜಿಪಿಆರ್.**

# ವೃತ್ತಿ, ನಿರೂಪಣಾ ಕೌಶಲ್ಯ ತರಬೇತಿ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು ಫೆಬ್ರವರಿ 3 (ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪರಿಶಿಷ್ಟ ಜಾತಿ/ಪಂಗಡದ ಪತ್ರಿಕೋದ್ಯಮ ಪದವಿ ಪಡೆದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿರುವ 'ವೃತ್ತಿ ಮತ್ತು ನಿರೂಪಣಾ ಕೌಶಲ್ಯ' ತರಬೇತಿಯ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಇಲಾಖಾ ಅಂತರ್ಜಾಲ ತಾಣ www.karnatakainformation.gov.in ನಲ್ಲಿ ಪ್ರಕಟಿಸಲಾಗಿದೆ.

ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಪ್ರದೇಶ ಉಪಯೋಜನೆಯಡಿ 2016-17 ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಗಿರಿಜನ ಸಮುದಾಯಕ್ಕೆ ಸೇರಿದ ಪತ್ರಿಕೋದ್ಯಮ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲಮೋ ಇನ್ ಜರ್ನಲಿಸಂ ಹಾಗೂ ಆಡಿಯೋ ವಿಷುಯಲ್ ವಿಷಯಗಳಲ್ಲಿ ಪದವಿ ಪಡೆದ ಅಭ್ಯರ್ಥಿಗಳಿಗೆ ವೃತ್ತಿ ಕೌಶಲ್ಯತೆ ರೂಢಿಸಿಕೊಳ್ಳಲು 'ವೃತ್ತಿ ಮತ್ತು ನಿರೂಪಣಾ ಕೌಶಲ್ಯ' ತರಬೇತಿಯನ್ನು ಏರ್ಪಡಿಸಲಾಗಿದೆ.

'ವೃತ್ತಿ ಮತ್ತು ನಿರೂಪಣಾ ಕೌಶಲ್ಯ' ತರಬೇತಿಗಾಗಿ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಮೆರಿಟ್ ಆಧಾರದ ಮೇಲೆ **ತಾತ್ಕಾಲಿಕ ಆಯ್ಕೆಪಟ್ಟಿ** ಯನ್ನು ಪ್ರಕಟಿಸಲಾಗಿದೆ. ಎಲ್ಲಾ ಸೆಮಿಸ್ಟರ್‌ಗಳ ಎಲ್ಲ ವಿಷಯಗಳ (all subjects) ಒಟ್ಟಾರೆ ಅಂಕಗಳನ್ನು ಗಣನೆಗೆ ತೆಗೆದುಕೊಂಡು ಶೇಕಡಾವಾರು ಅಂಕಗಳನ್ನು ನಿರ್ಧರಿಸಲಾಗಿದೆ.

ಇಲಾಖೆಯಿಂದ ಈ ಹಿಂದಿನ ವರ್ಷಗಳಲ್ಲಿ ಏರ್ಪಡಿಸಲಾದ ವೃತ್ತಿ ಕೌಶಲ್ಯ ತರಬೇತಿ ಕಾರ್ಯಕ್ರಮಗಳಿಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಪರಿಗಣಿಸಿಲ್ಲ.

ಆಯ್ಕೆಪಟ್ಟಿ ಕುರಿತು ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಫೆಬ್ರವರಿ 06, 2017 ರೊಳಗಾಗಿ ಲಿಖಿತ ರೂಪದಲ್ಲಿ ಇಲಾಖೆ ಕೇಂದ್ರ ಕಚೇರಿ 'ವಾರ್ತಾ ಮತ್ತು ಸಾರ್ವಜನಿಕ

ಸಂಪರ್ಕ ಇಲಾಖೆ', ವಾರ್ತಾ ಸೌಧ, ನಂ17, ಭಗವಾನ್ ಮಹಾವೀರ್ ರಸ್ತೆ, ಬೆಂಗಳೂರು-560 001 ಇಲ್ಲಿ ಸಲ್ಲಿಸುವುದು ಅಥವಾ koushalyatraining2017@gmail.com ಗೆ ಮೇಲ್ ಮೂಲಕವೂ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಯ ದೂರವಾಣಿ ಸಂಖ್ಯೆ 22028034 ಅನ್ನು ಸಂಪರ್ಕಿಸುವುದು.

**ಎಸ್‌ಎಂ./ಎಂಆರ್‌ಎಂ:ಜಿಪಿಆರ್.**

## ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಬೆಂಗಳೂರು ಫೆಬ್ರವರಿ 3 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಇಲಾಖಾ ಪರೀಕ್ಷೆಗಾಗಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಫೆಬ್ರವರಿ 9 ರಾತ್ರಿ 11-45 ಗಂಟೆಯವರೆಗೆ ವಿಸ್ತರಿಸಲಾಗಿದೆ.

ಆನ್‌ಲೈನ್ ಮೂಲಕ ಶುಲ್ಕ ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕವನ್ನು ಫೆಬ್ರವರಿ 10 ರಾತ್ರಿ 11-45 ಗಂಟೆಗೆ. ಅಂಚೆ ಕಛೇರಿಯಲ್ಲಿ ಶುಲ್ಕ ಸಂದಾಯ ಮಾಡಲು ಕೊನೆಯ ದಿನಾಂಕ ಮತ್ತು ಸಮಯ ಫೆಬ್ರವರಿ 10 ರ ಅಂಚೆ ಕಛೇರಿಯ ವೇಳೆ.

ಅರ್ಹ ಅಭ್ಯರ್ಥಿಗಳು ಆಯೋಗದ ವೆಬ್‌ಸೈಟ್ "http://kpsc.kar.nic.in"ನಲ್ಲಿ ಲಭ್ಯವಿರುವ ಅಧಿಸೂಚನೆಯಲ್ಲಿ ಅಗತ್ಯ ಮಾಹಿತಿಗಳನ್ನು ಪಡೆದು ಸೂಚನೆಗಳನುಸಾರ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಕೇಂದ್ರ ಕಛೇರಿಯ ದೂರವಾಣಿ 080- 30574944/ 30574945/ 30574957 ಅನ್ನು ಸಂಪರ್ಕಿಸಬಹುದಾಗಿದೆ.

ಎಸ್‌ಎಂ/ಕೆಎಂ

## ಗೋವಾರಾಜ್ಯದ ಚುನಾವಣೆ: ಗೋವಾ ರಾಜ್ಯದ ಮತದಾರರಿಗೆ ರಜೆ

ಬೆಂಗಳೂರು ಫೆಬ್ರವರಿ 3 (ಕರ್ನಾಟಕ ವಾರ್ತೆ)

ಗೋವಾ ರಾಜ್ಯದ ವಿಧಾನ ಸಭೆಗೆ ಫೆಬ್ರವರಿ 4 ರ ಶನಿವಾರದಂದು ನಡೆಯುವ ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ಕರ್ನಾಟಕ ರಾಜ್ಯದ ವಿವಿಧ ಸಾರ್ವಜನಿಕ ಉದ್ದಿಮೆಗಳಲ್ಲಿ, ಕೈಗಾರಿಕಾ ಸಂಸ್ಥೆಗಳಲ್ಲಿ ಅಥವಾ ಇತರೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗೋವಾ ವಿಧಾನ ಸಭಾ ಕ್ಷೇತ್ರಗಳ ಮತದಾರರಾಗಿರುವವರಿಗೆ ಮಾತ್ರ ಸೀಮಿತವಾಗಿ ಮತದಾನ ಮಾಡಲು ಅನುವಾಗುವಂತೆ Representation of People's Act, 1951 ಕಲಂ 135 ಬಿ ಅಡಿಯಲ್ಲಿ ವೇತನ ಸಹಿತ ರಜೆ ಪಡೆಯಲು ಅವಕಾಶವಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪ್ರಕಟಣೆ ತಿಳಿಸಿದೆ.

ಎಸ್‌ಎಂ/ಕೆಎಂ